## ನಗರಸಭೆ ಕಾರ್ಯಾಲಯ, ವಿಜಾಪೂರ

ನಂ:ನಸವಿ.:ಲೋ.ವಿ.:ನನಿ:ಟೆ.ಪ್ರ.: :2008-09 ದಿನಾಂಕ: 07-01-2009

### ಟೆಂಡರ ಪ್ರಕಟಣೆ

ಲೋಕೋಪಯೋಗಿ ಇಲಾಖೆಯಲ್ಲಿ ಹಾಗೂ ನಗರಸಭೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆಯ ಯಾವತ್ತೂ ಮಕ್ತೇದಾರರಿಗೆ ಈ ಮೂಲಕ ತಿಳಿಸುವದೇನೆಂದರೆ ಸನ್ 2008-09 ಸಾಲಿನ **ನಗರಸಭೆ ನಿಧಿ**ಯಲ್ಲಿ ಈ ಕೆಳಗೆ ಕಾಣಿಸಿದ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಶೇಕಡಾವಾರು ಟೆಂಡರಗಳನ್ನು ಕರೆಯಲಾಗಿದೆ. ಕಾರಣ ಇಚ್ಛೆವುಳ್ಳ ಗುತ್ತಿಗೆದಾರರು ಈ ಕೆಳಗಿನ ಸೂಚನೆ ಹಾಗೂ ಷರತ್ತುಗಳಿಗೆ ಒಳಪಟ್ಟು ಟೆಂಡರ ಸಲ್ಲಿಸಬಹುದಾಗಿದೆ.

| ಅ. | ಕಾಮಗಾರಿಗಳ ಹೆಸರು | ಅಂದಾಜು | ಇ.ಎಂ. | ಫಾರ್ಮ | ಕೆಲಸದ |
|---|---|---|---|---|---|
| 1) | ವಾ.ನಂ. 12, ಸಿದ್ರಾಮೇಶ್ವರ ನಗರದಲ್ಲಿ ಹಾಗೂ ಶಿವಯೋಗಿ ನಗರದಲ್ಲಿ ಒಳಚರಂಡಿ ಮಾಡುವದು. | 400000-00 | 10000-00 | 500-00 | 1 ತಿಂಗಳು |
| 2) | ವಾ.ನಂ. 12 ಲಕ್ಷ್ಮೀ ನಗರದಲ್ಲಿ ಒಳಚರಂಡಿ ಮಾಡುವದು. | 400000-00 | 10000-00 | 500-00 | ,, |
| 3) | ವಾ.ನಂ. 12ರಲ್ಲಿ ರಸ್ತೆಗಳಿಗೆ ಖಡೀ ಹಾಗೂ ಡಾಂಬರೀಕರಣ ಮಾಡುವದು. | 900000-00 | 18000-00 | 1000-00 | 3 ತಿಂಗಳು |
| 4) | ವಾ.ನಂ. 12ರಲ್ಲಿ ಸೋಡಿಯಂ & ಟ್ಯೂಬ್‌ಸೆಟ್ ಒದಗಿಸುವದು. | 100000-00 | 2500-00 | 200-00 | 1 ತಿಂಗಳು |

-: ಸೂಚನೆಗಳು :-

1. ಖಾಲಿ ಟೆಂಡರ ಫಾರ್ಮಗಳಿಗಾಗಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 04-02-2009 ಸಂಜೆ 5-00 ಗಂಟೆಯವರೆಗೆ
2. ಖಾಲಿ ಟೆಂಡರ ಫಾರ್ಮಗಳನ್ನು ದಿನಾಂಕ: 06-02-2009 ರ ಸಂಜೆ 5-00 ಘಂಟೆಯವರೆಗೆ ಪೂರೈಸಲಾಗುವದು.
3. ಭರ್ತಿ ಮಾಡಿದ ಟೆಂಡರ ಫಾರ್ಮಗಳು ಸಲ್ಲಿಸುವ ದಿನಾಂಕ: 10-02-2009 ಸಂಜೆ 4-30 ಘಂಟೆಯವರೆಗೆ
4. ದಿನಾಂಕ: 10-02-2009 ರಂದು ಸಂಜೆ 5-00 ಘಂಟೆಗೆ ನಗರಸಭೆಯ ಸಭಾಭವನದಲ್ಲಿ ಹಾಜರಿರುವ ಬಿಡ್ಡುದಾರರ ಸಮಕ್ಷಮದಲ್ಲಿ ಸ್ವೀಕೃತವಾಗಿರುವ ಟೆಂಡರಗಳನ್ನು ಹಾಗೂ ದರವಾರುಗಳನ್ನು ತೆರೆಯಲಾಗುವದು.
5. ಸೂಚಿಸಿದ ದಿನಾಂಕಗಳಂದು ರಜೆ ಘೋಷಿಸಲ್ಪಟ್ಟರೆ ಮುಂದಿನ ಕೆಲಸದ ದಿನ ಅಂತ ಪರಿಗಣಿಸುವದು.

-: ಷರತ್ತುಗಳು:-

1. ಖುಲ್ಲಾ ಟೆಂಡರಗಳ ಫಾರ್ಮಗಳ ಬೆಲೆಯನ್ನು ನಗರಸಭೆಯಲ್ಲಿ ಪಾವತಿಸಿ ಅರ್ಜಿ ಸಂಗಡ ಲಗತ್ತಿಸತಕ್ಕದ್ದು.
2. ಟೆಂಡರ ಫಾರ್ಮ ಸಲುವಾಗಿ ಅರ್ಜಿ ಸಲ್ಲಿಸುವಾಗ ಕಾಮಗಾರಿಯ ಇ.ಎಂ.ಡಿ. ಹಣದ ಡಿ.ಡಿ.ಯನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.
3. ದರಖಾಸ್ತು ಮೋಹರಬಂದ ಮಾಡಿದ್ದು ಇರತಕ್ಕದ್ದು.
4. ಠೇವಣಿ ಇಡದ ಮತ್ತು ಅವಧಿ ಮೀರಿಬಂದ ದರಖಾಸ್ತುಗಳನ್ನು ಪರಿಗಣಿಸಲಾಗುವುದಿಲ್ಲ.
5. ಕಾಮಗಾರಿಯನ್ನು ಕಡ್ಡಾಯವಾಗಿ ಪೌರಾಡಳಿತ ನಿರ್ದೇಶನಾಲಯ ಅಥವಾ ಜಿಲ್ಲಾಧಿಕಾರಿಗಳ ಕಾರ್ಯಲಯದಿಂದ ನಿಯಮಿಸಿದ ಅಧಿಕೃತ ಥರ್ಡ ಪಾರ್ಟಿ ಅವರಿಂದ ತಪಾಸಣೆ ಮಾಡಿಸತಕ್ಕದ್ದು. ಹಾಗೂ ಕಾಮಗಾರಿಗೆ ಉಪಯೋಗಿಸುವ ಎಲ್ಲಾ ಸಾಮಗ್ರಿಗಳ ಗುಣ ನಿಯಂತ್ರಣ ತಪಾಸಣೆ ತಾವೇ ಮಾಡಿಸಿ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
6. ಕಾಮಗಾರಿಯ 2 ವರ್ಷಗಳ ನಿರ್ವಹಣೆ ಅವಧಿ ಪೂರ್ತಿಗೊಂಡ ನಂತರ ಪುನಃ 3 ನೇ ಪಕ್ಷದ ತಪಾಸಣಾ ಸಂಸ್ಥೆಯವರಿಂದ ಕಾಮಗಾರಿ ಗುಣಮಟ್ಟದ ಬಗ್ಗೆ ಪರಿಶೀಲಿಸಿದ ಪ್ರಮಾಣಪತ್ರ ಸಲ್ಲಿಸಿದ ನಂತರ ತಮ್ಮ ಮುಂಗಡ ಠೇವಣಿ ಹಾಗೂ ಭದ್ರತಾ ಠೇವಣಿ ಸಂದಾಯ ಮಾಡಲಾಗುವದು.
7. ನಗರಸಭೆಯಿಂದ ಯಾವುದೇ ತರಹದ ಸಾಮಾಗ್ರಿಗಳನ್ನು ಪೂರೈಸಲಾಗುವದಿಲ್ಲ.
8. ಟೆಂಡರ್ ಮಂಜೂರಾತಿ ಆದ ನಂತರ ಕಾರ್ಯಾದೇಶ ಪಡೆಯಲು ಅಂದಾಜು ಹಣದ **ಶೇ.5** ರಷ್ಟು ಭದ್ರತಾ ಠೇವಣಿಯನ್ನು ಡಿ.ಡಿ./ನಗದು ರೂಪದಲ್ಲಿ ನಗರಸಭೆಗೆ ಭರಿಸತಕ್ಕದ್ದು. ಹಾಗೂ ಸದರಿ ಹಣವನ್ನು ಕಾಮಗಾರಿ ಪೂರ್ಣಗೊಳಿಸಿ ಬಿಲ್ಲು ಪಾವತಿಸಿದ ನಂತರ ಪರತ ನೀಡಲಾಗುವದು.
9. ಯಾವುದೇ ಕಾರಣ ಕೊಡದೇ ಯಾವದೇ ದರಖಾಸ್ತುಗಳನ್ನು ಸ್ವೀಕರಿಸುವ ಇಲ್ಲವೆ ಯಾವದೇ ದರಖಾಸ್ತುಗಳನ್ನು ತಿರಸ್ಕರಿಸುವ ಅಧಿಕಾರ ಸಕ್ಷಮ ಅಧಿಕಾರಿಗಳಿಗೆ ಒಳಪಟ್ಟಿರುತ್ತದೆ.
10. ಟೆಂಡರ ಕಾಮಗಾರಿಯು ಫಾರ್ಮ ನಂ:ಅನುಭಂದ-2 ಕೆ/ಡಬ್ಲ್ಯೂ-2 ರಂತೆ ಪುಟ ಸಂಖ್ಯೆ: 1 ರಿಂದ 40ವರೆಗೆ ಒಳಪಟ್ಟಿರುತ್ತದೆ.
11. ಮಕ್ತೇದಾರರು ಕಾಮಗಾರಿಗಳನ್ನು ನಗರಸಭೆಯ ಪಾರದರ್ಶಕತಾ ನಿಯಮದಡಿ ಮಾಡತಕ್ಕದ್ದು.
12. ಅಂದಾಜು ಪತ್ರಿಕೆಯ ದರಕ್ಕಿಂತ ಕಡಿಮೆ ದರ ಸೂಚಿಸಲು ಬಯಸುವ ಗುತ್ತಿಗೆದಾರರು ವ್ಯತ್ಯಾಸ ಮೊತ್ತದ ಡಿ.ಡಿ.ಯನ್ನು ಟೆಂಡರ ಜೊತೆಗೆ ಲಗತ್ತಿಸತಕ್ಕದ್ದು ಇಲ್ಲವಾದಲ್ಲಿ ಅಂತಹ ಟೆಂಡರಗಳನ್ನು ತಿರಸ್ಕರಿಸಲಾಗುವುದು.
13. ಕಾಮಗಾರಿ ನಡೆಯುವ ಸ್ಥಳದಲ್ಲಿ ಕಾಮಗಾರಿಯ ಪೂರ್ಣ ಮಾಹಿತಿಯುಳ್ಳ ಸೂಚನಾ ಫಲಕವನ್ನು ಅಳವಡಿಸತಕ್ಕದ್ದು ಮತ್ತು ಕಾಮಗಾರಿ ಸ್ಥಳದಲ್ಲಿ ಗುತ್ತಿಗೆದಾರರವತಿಯಿಂದ ಡಿ.ಸಿ.ಇ. ವಿದ್ಯಾರ್ಹತೆಯುಳ್ಳವರನ್ನು ಕಾಮಗಾರಿಯ ವೇಳೆ ಮೇಲುಸ್ತುವಾರಿ ನೋಡಿಕೊಳ್ಳಲು ನಿಯೋಜಿಸುವುದು.ಕಾಮಗಾರಿಗಳ ಮೂರು ಹಂತದ ಛಾಯಾ ಚಿತ್ರವನ್ನು ಕಡ್ಡಾಯವಾಗಿ ತೆಗೆಯತಕ್ಕದ್ದು (ಕಾಮಗಾರಿಯ ಪೂರ್ವದಲ್ಲಿ, ಪ್ರಗತಿಯಲ್ಲಿದ್ದಾಗ ಹಾಗೂ ಕಾಮಗಾರಿ ಪೂರ್ಣಗೊಂಡ ನಂತರ)
14. ನಿಗದಿತ ಸಮಯದೊಳಗೆ ಕಾಮಗಾರಿ ಪೂರ್ತಿಗೊಳಿಸದೇ ಇದ್ದಲ್ಲಿ ತಮಗೆ ಯಾವುದೇ ನೋಟಿಸನ್ನು ನೀಡದೇ ತಮ್ಮ ಟೆಂಡರ ರದ್ದುಗೊಳಿಸಿ 2ನೇ ಕಡಿಮೆ ದರ ಇದ್ದ ಗುತ್ತಿಗೆದಾರರಿಂದ ಕೆಲಸ ಮಾಡಿಸಲು ಕ್ರಮ ಜರುಗಿಸಲಾಗುವುದು ಹಾಗೂ ಹೆಚ್ಚಿಗೆ ಬೀಳುವ ಮೊತ್ತವನ್ನು ತಮ್ಮಿಂದ ವಸೂಲಿ ಮಾಡಲಾಗುವುದು.
15. ನಗರಸಭೆಯಿಂದ ಕಾಲಕಾಲಕ್ಕೆ ವಿಧಿಸುವ ಕರಾರುಗಳಿಗೆ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.

16. ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ಕಾಮಗಾರಿ ವಿಭಾಗದಲ್ಲಿ ಅಭಿಯಂತರರನ್ನು ವಿಚಾರಿಸಬಹುದು ಅಥವಾ ನಗರಸಭೆಯ ಅಂತರ್ಜಾಲ www.bijpaurcity.gov.in ನಲ್ಲಿ ಪಡೆಯಬಹುದಾಗಿದೆ.

17. ಟೆಂಡರ್ ಫಾರ್ಮಗಳನ್ನು ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ನಗರಸಭೆ ಕಛೇರಿಗಳಲ್ಲಿ ಪೂರೈಸಲಾಗುವದು. & ಭರ್ತಿ ಮಾಡಿದ ಟೆಂಡರ್ ಫಾರ್ಮಗಳನ್ನು ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ನಗರಸಭೆ ಕಛೇರಿಗಳಲ್ಲಿಯ ಟೆಂಡರ್ ಬಾಕ್ಸಗಳಲ್ಲಿ ಹಾಕಬಹುದಾಗಿದೆ.

| ಸಹಿ/- | ಸಹಿ/- | ಸಹಿ/- |
|---|---|---|
| **(ಶ್ರೀ.ಕೆ.ಕೆ.ಜಾಲಿಬೇರಿ)ಬಿ.ಇ.** | **(ಶ್ರೀ.ಎಸ್.ಬಿ.ಕಟ್ಟಿಮನಿ) ಕೆ.ಎಂ.ಎ.ಎಸ್.** | **(ಶ್ರೀಮತಿ.ಚಾಂದೂಬಾಯಿ.ಚವ್ಹಾಣ)** |
| **ಸ.ಕಾ.ಅಭಿಯಂತರರು** | **ಪೌರಾಯುಕ್ತರು** | **ಅಧ್ಯಕ್ಷರು** |
| **ನಗರಸಭೆ ವಿಜಾಪೂರ** | **ನಗರಸಭೆ ವಿಜಾಪೂರ** | **ನಗರಸಭೆ ವಿಜಾಪೂರ** |